SaF

# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ (ಕೆ.ಎ.ಐ.ಸಿ) ರವರ ಒಡೆತನದಲ್ಲಿರುವ 5 ಎಕರೆ 11 ಗುಂಟೆ ಭೂಮಿ ಮತ್ತು ಈ ಭೂಮಿಯಲ್ಲಿ ನಿರ್ಮಾಣಗೊಂಡಿರುವ 30,500 ಚದರ ಅಡಿ ವಿಸ್ತೀರ್ಣದ ಕಟ್ಟಡಗಳನ್ನು ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂ: ತೋಇ/88/ತೋಯೋಕಾ/2013, ದಿ: 23-08-2013.

2. ದಿ: 12-09-2013 ಮತ್ತು ದಿ:11-02-2014ರ ಕೆ.ಎ.ಐ.ಸಿ. ರವರ 279 ಮತ್ತು 280ನೇ ಮಂಡಳಿಯ ನಿರ್ದೇಶಕರುಗಳ ಸಭೆಯ ತೀರ್ಮಾನ.

3. ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರ ಪ್ರಸ್ತಾವನೆ ಸಂ:ತೋಇ/ಸತೋನಿ/ಪುವಿ/ಸತೋಅ/10/2013-14/21, ದಿ:18-01-2014.

<u>**ಪ್ರಸ್ತಾವನೆ:**</u>

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿ: 23-08-2013ರ ಸರ್ಕಾರದ ಆದೇಶದಲ್ಲಿ 2013-14ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ "ಹೂ ಕೃಷಿಗೆ ಉತ್ತೇಜನ" ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ.

ಮೇಲೆ ಓದಲಾದ ಕ್ರಮಾಂಕ (2) ದಿ: 12-09-2013 ಮತ್ತು ದಿ: 11-02-2014ರ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಹೆಬ್ಬಾಳ, ಬೆಂಗಳೂರು ರವರ 279 ಮತ್ತು 280ನೇ ಮಂಡಳಿಯ ನಿರ್ದೇಶಕರುಗಳ ಸಭೆಯಲ್ಲಿ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ರವರ ಒಡೆತನದಲ್ಲಿರುವ 5 ಎಕರೆ 11 ಗುಂಟೆ ವಿಸ್ತೀರ್ಣದ ಭೂಮಿ ಮತ್ತು ಈ ಭೂಮಿಯಲ್ಲಿ 30,500 ಚದರ ಅಡಿಗಳ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿರುವ International flower Auction Building Complex (IFABC) ಕಟ್ಟಡವನ್ನು (ಇದರಲ್ಲಿ Karnataka State Seeds Organic Certification Agency ರವರಿಗೆ ಮಾರ್ಗಸೂಚಿ ಬೆಲೆಯಲ್ಲಿ ವರ್ಗಾಯಿಸಬೇಕಾಗಿರುವ 5,000 ಚದರ ಅಡಿ ಭೂಮಿ ಮತ್ತು ಕೆ.ಎ.ಐ.ಸಿ ಕಛೇರಿಯ ಉಪಯೋಗಕ್ಕಾಗಿ ಉಳಿಸಿಕೊಳ್ಳಲು ನಿರ್ಣಯಿಸಿರುವ ಉತ್ತರ ಪಶ್ಚಿಮ ದಿಕ್ಕಿನಲ್ಲಿರುವ ಅನೆಕ್ಸ್ ಕಟ್ಟಡವನ್ನು ಹೊರತುಪಡಿಸಿ, ಹಾಗೂ 15 ಅಡಿ ಅಗಲ ಮತ್ತು 198 ಅಡಿ ಉದ್ದದ ರಸ್ತೆ ಜಾಗವನ್ನು Karnataka State Seeds Organic Certification Agency ರವರ ಉಪಯೋಗಕ್ಕಾಗಿ ಮಾಮೂಲ ಹಕ್ಕು ಆಧಾರದ ಮೇಲೆ (easementary rights) ಬಿಡಬೇಕೆಂದು ನಿರ್ಣಯಿಸಿದ ಪ್ರಕಾರ ಬಿಡುವುದು) ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲು ಹಾಗೂ ಇದಕ್ಕಾಗಿ ತೋಟಗಾರಿಕೆ ~~ಇಲಾಖೆಯು ರೂ.100.00 ಲಕ್ಷಗಳನ್ನು ಕೆ.ಎ.ಐ.ಸಿ.ಗೆ ಬಿಡುಗಡೆ ಮಾಡಬೇಕೆಂದು ಸರ್ಕಾ~~ರ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಜರುಗಿದ ಆಡಳಿತ ಮಂಡಳಿಯ ಮೇಲ್ಕಂಡ ಸಭೆಗಳಲ್ಲಿ ನಿರ್ಣಯಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರು ಸಾರ್ವಜನಿಕ ಹಿತದೃಷ್ಟಿಯಿಂದ ಕೆ.ಎ.ಐ.ಸಿ. ಯವರ ಒಡತನದಲ್ಲಿರುವ 5 ಎಕರೆ 11 ಗುಂಟೆ ವಿಸ್ತೀರ್ಣದ ಭೂಮಿ ಮತ್ತು ಈ ಭೂಮಿಯಲ್ಲಿ 30,500 ಚದರ ಅಡಿಗಳ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿರುವ ಕಟ್ಟಡವನ್ನು ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲು ಅನುವಾಗುವಂತೆ ಸರ್ಕಾರದ ಕೃಷಿ ಇಲಾಖೆಯಿಂದ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

..2..

**ಸರ್ಕಾರದ ಆದೇಶ ಸಂಖ್ಯೆ: ಕೃಇ/11/ಕೃಇಕ/2014, ಬೆಂಗಳೂರು,**
**ದಿನಾಂಕ: 16-07-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2013-14ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ "ಹೂ ಕೃಷಿಗೆ ಉತ್ತೇಜನ" ಎಂಬ ಹೊಸ ಯೋಜನೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ (KAIC), ಹೆಬ್ಬಾಳ, ಬೆಂಗಳೂರು ರವರ ಒಡೆತನದಲ್ಲಿರುವ 5 ಎಕರೆ 11 ಗುಂಟೆ ವಿಸ್ತೀರ್ಣದ ಭೂಮಿ ಮತ್ತು ಈ ಭೂಮಿಯಲ್ಲಿ 30,500 ಚದರ ಅಡಿಗಳ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿರುವ International flower Auction Building Complex (IFABC) ಕಟ್ಟಡದಲ್ಲಿನ ಈ ಕೆಳಕಂಡವುಗಳನ್ನು ಹೊರತುಪಡಿಸಿ ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲು ಹಾಗೂ ಇದಕ್ಕಾಗಿ ತೋಟಗಾರಿಕೆ ಇಲಾಖೆಯು ರೂ.100.00 ಲಕ್ಷಗಳನ್ನು (ನೂರು ಲಕ್ಷ ರೂಪಾಯಿಗಳು ಮಾತ್ರ) ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ (KAIC), ಹೆಬ್ಬಾಳ, ಬೆಂಗಳೂರು ರವರಿಗೆ ಬಿಡುಗಡೆ ಮಾಡುವಂತೆ ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿ ಆದೇಶಿಸಿದೆ.

Karnataka State Seeds Organic Certification Agency ರವರಿಗೆ ಮಾರ್ಗ ಸೂಚಿ ಬೆಲೆಯಲ್ಲಿ ವರ್ಗಾಯಿಸಬೇಕಾಗಿರುವ 5,000 ಚದರ ಅಡಿ ಭೂಮಿ ಮತ್ತು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಕಛೇರಿಯ ಉಪಯೋಗಕ್ಕಾಗಿ ಉಳಿಸಿಕೊಳ್ಳಲು ನಿರ್ಣಯಿಸಿರುವ ಉತ್ತರ ಪಶ್ಚಿಮ ದಿಕ್ಕಿನಲ್ಲಿರುವ ಅನೆಕ್ಸ್ ಕಟ್ಟಡವನ್ನು ಹಾಗೂ 15 ಅಡಿ ಅಗಲ ಮತ್ತು 198 ಅಡಿ ಉದ್ದದ ರಸ್ತೆ ಜಾಗವನ್ನು Karnataka State Seeds Organic Certification Agency ರವರ ಉಪಯೋಗಕ್ಕಾಗಿ ಮಾಮೂಲ ಹಕ್ಕು ಆಧಾರದ ಮೇಲೆ (easementary rights) ಬಿಡುವುದು.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಜ್ಯೋತಿ.ಆರ್.ಜೆ),**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೃಷಿ ಇಲಾಖೆ(ಯೋಜನೆ).**

16/7/14

**ಪ್ರತಿಯನ್ನು:-**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬೆಂಗಳೂರು.
5. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ಬೆಂಗಳೂರು.
9. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ (KAIC), ಹೆಬ್ಬಾಳ, ಬೆಂಗಳೂರು
12. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
13. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕ, ಕೃಷಿ ಇಲಾಖೆ.
14. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.